BKR SERVICES GROUP

# B.K.R. SWAMY SECURITY AGENCIES

Contractual / Temporary Staffing | Manpower Outsourcing | Security Services

**An ISO 9001 : 2015 CERTIFIED UNIT** **Rely on us, we rely on experience.**

| LABOUR LICENSE # | PF # | ESI # | PAN # | PT # | GSTIN | POLICE LICENSE |
|---|---|---|---|---|---|---|
| 110/2/CE/1659/1996 | KNSHG 17627 | 58000040900001001 | AGJPB-2387A | CTO/SECURITY/03-04 | 29AGJPB2387A1ZN | ISD/PSA-64/2011 |


ಗೆ,

DATE-06/12/2022

**ಜಿಲ್ಲಾ ಸೂಚನಾ ವಿಜ್ಞಾನ ಅಧಿಕಾರಿಗಳು**
**ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ**
**ಜಿಲ್ಲಾ ಪಂಚಾಯತ್**
**ಶಿವಮೊಗ್ಗ**

**ಪತ್ರಿಕಾ ಪ್ರಕಟಣೆ**

ವಿಷಯ :- ಶಿವಮೊಗ್ಗ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಕ್ಕೆ ಅಕೌಂಟ್ಸ್ ಮ್ಯಾನೇಜರ್ ಹುದ್ದೆ ಒದಗಿಸಲು ನೇಮಕಾತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ ಇವರ ಪತ್ರ ಸಂಖ್ಯೆ: ಜಿಪಂಶಿ/ಮಾಗಾರಾಗ್ರಾ ಉಖಾಯೋ/ಹೋಗುಸಿ/2022-23 .

ಮಾನ್ಯರೇ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ-/09/12/2022 ರಿಂದ 23/12/2022 ರವರೆಗೆ ನಾವುಗಳು ಅಕೌಂಟ್ ಮ್ಯಾನೇಜರ್ ಹುದ್ದೆಗೆ ಪತ್ರಿಕಾ ಪ್ರಕಟಣೆ ನೀಡುತ್ತಿದ್ದು ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು NIC ವೆಬ್ಸೈಟ್ ನಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಉಲ್ಲೇಖಿತ ಪತ್ರದನ್ವಯ ತಿಳಿಸಿರುವುದರಿಂದ ತಾವುಗಳು NIC ವೆಬ್ಸೈಟ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು ಸಹಕರಿಸಬೇಕಾಗಿ ವಿನಂತಿ.

ವಿದ್ಯಾರ್ಹತೆ ವಯೋಮಿತಿ ಮತ್ತು ಮಾಸಿಕ ಸಂಭಾವನೆ

| ಕ್ರ.ಸಂ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಹಾಗೂ ಅನುಭವ | ವಯೋಮಿತಿ |
|---|---|---|---|---|
| 01 | ಅಕೌಂಟ್ಸ್ ಮ್ಯಾನೇಜರ್ | 01 | M.Com/MBA Finance ೩೫ ವರ್ಷ ಮೀರಿರಬಾರದು ಕನಿಷ್ಠ ೨ ವರ್ಷಗಳ ಸಂಬಂದಿತ ಅನುಭವ ಹೊಂದಿರಬೇಕು. | 35 ವರ್ಷ ಮೀರಿರಬಾರದು |

ಅರ್ಜಿ ಸಲ್ಲಿಸುವ ವಿಧಾನ

A) Online ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ 09-12-2022

B) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 23-12-2022

For BKR Swamy Security Agencies

Authorised Signature

Off : # 2644, MCC "B" Block, 6th Main, 2nd Croos, Near Water Tank, **DAVANGERE - 577 004.** KARNATAKA.
☎ : 08192-**409651**, **Mob :** +91-94484 15320, 9481864934.
e-mail : swamybkr@yahoo.com **Web :** www.bkrservice.com

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಶಿವಮೊಗ್ಗ
ಅಂಚೆ ಪೆಟ್ಟಿಗೆ ಸಂಖ್ಯೆ:127, ಕುವೆಂಪು ರಸ್ತೆ, ಶಿವಮೊಗ್ಗ-577201
E-mail ID: pdnregazpsmg@gmail.com Phone 08182-267231
ಸಂ:ಜಿಪಂಶಿ/ಮಗಾರಾಗ್ರಾಉಖಾಯೋ/ಹೊಗುಸಿ/2022-23 ದಿನಾಂಕ: 20.10.2022.

ಗೆ,

ಬಿ ಕೆ ಆರ್ ಸ್ವಾಮಿ ಸೆಕ್ಯೂರಿಟಿ ಏಜೆನ್ಸೀಸ್,
#2644, ಎಂ.ಸಿ.ಸಿ.ಬಿ ಬ್ಲಾಕ್, 6ನೇ ಮುಖ್ಯ ರಸ್ತೆ,
2ನೇ ತಿರುವು, ವಾಟರ್ ಟ್ಯಾಂಕ್ ಹತ್ತಿರ,
ದಾವಣಗೆರೆ-577004.

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ಅಕೌಂಟ್ಸ್ ಮ್ಯಾನೇಜರ್‌ನ್ನು ಈ ಕಛೇರಿಗೆ ನಿಯೋಜನೆ ಮಾಡುವ ಕುರಿತು.

ಉಲ್ಲೇಖ: ಆಯುಕ್ತರು, ಗ್ರಾಮೀಣಾಭಿವೃದ್ಧಿ ಗ್ರಾ & ಪಂ ರಾಜ್ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ: ಗ್ರಾಅಪ34/2 ಉಖಾಯೋ2020 ದಿ:20.07.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲಾ ಪಂಚಾಯತ್ ನರೇಗಾ ಶಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ನಿಮ್ಮ ಸಂಸ್ಥೆಯ ಸಿಬ್ಬಂದಿಯಾದ ಅಕೌಂಟ್ಸ್ ಮ್ಯಾನೇಜರ್‌ರವರು ದಿನಾಂಕ:23.09.2022 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಕಛೇರಿಯ ಸುಗಮ ಆಡಳಿತ ನಿರ್ವಹಣೆಗೆ ತೊಂದರೆಯಾಗುತ್ತಿದೆ

ಸದರಿ ಹುದ್ದೆಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 34/2 ಉಖಾಯೋ2020 ದಿ:20.07.2020ರಲ್ಲಿ ತಿಳಿಸಿರುವಂತೆ ನಿಯಮಾನುಸಾರ ಕ್ರಮವಹಿಸಿ ಅಕೌಂಟ್ಸ್ ಮ್ಯಾನೇಜರ್ ಹುದ್ದೆಯನ್ನು ಭರ್ತಿ ಮಾಡಿ ತುರ್ತಾಗಿ ಈ ಕಛೇರಿಗೆ ನಿಯೋಜನೆ ಮಾಡಿಕೊಡುವಂತೆ ತಿಳಿಸಿದೆ.

ಲಗತ್ತು: ಉಲ್ಲೇಖಿತ ಸರ್ಕಾರದ ಪತ್ರ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ
ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ
ಮಹಾತ್ಮ ಗಾಂಧಿ ನರೇಗಾ ಯೋಜನೆ,
ಜಿಲ್ಲಾ ಪಂಚಾಯತ್ ಶಿವಮೊಗ್ಗ.

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001
ದೂರವಾಣಿ ಸಂಖ್ಯೆ:080-22342161, E-mail:karnregs@gmail.com

ಸಂ: ಗ್ರಾಅಪ ಉಖಾಯೋ 2020 ದಿನಾಂಕ: 20.07.2020

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ "MGNREGA Accounts Manager" ಗಳ ನೇಮಕಾತಿ ಮಾಡಿಕೊಳ್ಳುವ ಕುರಿತು..

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ಶಾಸನಬದ್ಧ ಬಾಧ್ಯತೆ (Statutory obligation) ಗಳಾದ ಆದಾಯ ತೆರಿಗೆ ಪಾವತಿ, ಸರಕು ಮತ್ತು ಸೇವಾ ತೆರಿಗೆ ಪಾವತಿ, ರಾಜಧನ ಕಟಾವಣೆ ಮತ್ತು ಪಾವತಿ, ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆ ಹಾಗೂ ನಿರ್ವಹಣೆ, ತಂತ್ರಾಂಶದ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಬ್ಯಾಂಕ್‌ಗಳ ಜೊತೆಗೆ ಸಮನ್ವಯ ಸಾಧಿಸುವುದು ಹಾಗೂ ಇನ್ನಿತರ ಲೆಕ್ಕಪತ್ರ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಈ ಮೇಲಿನ ವಿಷಯದಲ್ಲಿ ಸಹಕರಿಸಲು ಲೆಕ್ಕಪತ್ರ ವಿಷಯದಲ್ಲಿ ನುರಿತರಾದ ಅಭ್ಯರ್ಥಿಗಳನ್ನು "Accounts Manager" ಆಗಿ ಪ್ರತಿ ಜಿಲ್ಲಾ ಪಂಚಾಯಿತಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

**ಸಾಮಾನ್ಯ ಅರ್ಹತೆ:-**
1) M.Com/MBA Finance ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು.
2) ವಯಸ್ಸು 35 ವರ್ಷ ಮೀರಿರಬಾರದು.
3) ಕನಿಷ್ಠ 2 ವರ್ಷಗಳ ಸಂಬಂಧಿತ ಅನುಭವ ಹೊಂದಿರಬೇಕು.

**ವೇತನ:-** ಮಾಸಿಕ ಸಂಭಾವನೆ (Gross) ರೂ.30,000/- + ಪ್ರಯಾಣಭತ್ಯೆ

**ಕರ್ತವ್ಯಗಳು:-**
1) ನರೇಗಾ ಯೋಜನೆಗೆ ಸಂಬಂಧಿಸಿದ ಶಾಸನಬದ್ಧ ಕಟಾವಣೆಗಳಾದ ಸರಕು ಮತ್ತು ಸೇವಾ ತೆರಿಗೆ, ಟಿಡಿಎಸ್, ರಾಜಧನ ಕಟಾವಣೆ ಮತ್ತು ಪಾವತಿಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಹಕರಿಸುವುದು.
2) ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳ ತಯಾರಿಕೆ ಮತ್ತು ನಿರ್ವಹಣೆ.
3) ಉದ್ಯೋಗ ಚೀಟಿಯೊಂದಿಗೆ ಆಧಾರ್ ಕಾರ್ಡ್ ದಾಖಲಾತಿ ಜೋಡಣೆ ಮೇಲುಸ್ತುವಾರಿ ವಹಿಸುವುದು.
4) ನರೇಗಾ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಬ್ಯಾಂಕ್‌ಗಳ ಜೊತೆ ಸಮನ್ವಯ ಸಾಧಿಸುವುದು.
5) DPC ಮತ್ತು ADPC ಗಳಿಗೆ ಸಹಕರಿಸುವುದು.
6) ನರೇಗಾ ಯೋಜನೆಗೆ ಸಂಬಂಧಿಸಿದಂತೆ ಇನ್ನಿತರ ಲೆಕ್ಕಪತ್ರ ಹಾಗೂ ಶಾಸನಬದ್ಧ ಬಾಧ್ಯತೆ (Statutory obligation) ಗಳನ್ನು ನಿರ್ವಹಿಸುವುದು.

**ನೇಮಕಾತಿ ವಿಧಾನ:**

1) ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಅರ್ಜಿ ಆಹ್ವಾನಿಸುವುದು.
2) ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು NIC ಯಿಂದ ಜಿಲ್ಲಾ ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಪಡೆಯುವುದು.
3) ಅಭ್ಯರ್ಥಿಗಳ ಸಂದರ್ಶನ (Interview) ಇರುವುದಿಲ್ಲ.
4) ಹುದ್ದೆಗೆ ನಿಗದಿಪಡಿಸಿದ ವಿಷಯದ ಸ್ನಾತಕೋತ್ತರ ಪದವಿಗೆ – **50** ಅಂಕಗಳು (ಉದಾಹರಣೆಗೆ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ ಆ ಅಭ್ಯರ್ಥಿಗೆ 70 X 0.50=35 ಅಂಕಗಳನ್ನು ನೀಡುವುದು.)

ಸೂಚನೆ: ಒಂದು ವೇಳೆ ಅಭ್ಯರ್ಥಿಯು ಸಿ.ಜಿ.ಪಿ.ಎ.( cumulative grade point average) ರೀತ್ಯಾ ಅಂಕಗಳನ್ನು ಪಡೆದಿದ್ದಲ್ಲಿ, ಉದಾಹರಣೆಗೆ 10 ಅಂಕಗಳಿಗೆ 9 ಅಂಕ ಪಡೆದಿದ್ದಲ್ಲಿ, ಅದನ್ನು 90% ಎಂದು ಪರಿಗಣಿಸುವುದು.

5) ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯಾನುಭವಕ್ಕಾಗಿ (Experience)-**30** ಅಂಕಗಳು
   a) 2 ವರ್ಷ ಅನುಭವ ಹೊಂದಿರುವವರಿಗೆ 20 ಅಂಕಗಳು.
   b) 2 ರಿಂದ 3 ವರ್ಷಗಳ ಅನುಭವ ಹೊಂದಿರುವವರಿಗೆ 25 ಅಂಕಗಳು.
   c) 3 ವರ್ಷಗಳಿಗೆ ಮೇಲ್ಪಟ್ಟ ಅನುಭವ ಹೊಂದಿರುವವರಿಗೆ 30 ಅಂಕಗಳು.
6) Tally 9.0 ಮಾಡಿದ್ದು, ಪ್ರಮಾಣಪತ್ರವನ್ನು ಹೊಂದಿರುವವರಿಗೆ 5 ಅಂಕಗಳು.
7) GST Filing ಪ್ರಮಾಣಪತ್ರವನ್ನು ಹೊಂದಿರುವವರಿಗೆ **5** ಅಂಕಗಳು.
8) Articleship ಪ್ರಮಾಣಪತ್ರವನ್ನು ಹೊಂದಿರುವವರಿಗೆ **10** ಅಂಕಗಳು.
   ಒಟ್ಟು ಅಂಕಗಳು **100** ಅಂಕಗಳು.

**ಉದಾಹರಣೆ:- X** ಅಭ್ಯರ್ಥಿಯು ಸ್ನಾತಕೋತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದು, 4 ವರ್ಷಗಳ ಸಂಬಂಧಿತ ಅನುಭವವನ್ನು ಹೊಂದಿರುತ್ತಾನೆ ಹಾಗೂ Tally 9.0 ಪ್ರಮಾಣಪತ್ರವನ್ನು ಹೊಂದಿರುತ್ತಾರೆ. ಆ ಅಭ್ಯರ್ಥಿಯು ಗಳಿಸಿದ ಅಂಕಗಳು ಈ ಕೆಳಗಿನಂತಿದೆ.

| | |
|---|---|
| ಸ್ನಾತಕೋತರ ಪದವಿ 70 X 0.50 | =35 |
| ಅನುಭವ (4ವರ್ಷಗಳು) | =30 |
| ಒಟ್ಟು ಅಂಕಗಳು | =65 |

**ನೇಮಕಾತಿ ವೇಳಾಪಟ್ಟಿ:-**

| | |
|---|---|
| ಪ್ರಕಟಣೆ ದಿನಾಂಕ | 27.07.2020 |
| ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 10.08.2020 |
| ಆಯ್ಕೆ ಮಾಡಿಕೊಳ್ಳಲು ಕೊನೆಯ ದಿನಾಂಕ | 15.08.2020 |

ತಮ್ಮ ವಿಶ್ವಾಸಿ,

20.07

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:-
1) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ.
2) ಕಛೇರಿ ಪ್ರತಿ.